# ಚತುರ್ಭಾಷೆಗಳ ಚಮಕ್



ಚಿತ್ರ: ಕ್ಯಾಮರಾಮನ್ ಗಂಗತೊ ರಾಮ್‌ಬಾಬು (ತೆಲುಗು)
ನಿರ್ದೇಶಕ: ಪೂರಿ ಜಗನ್ನಾಥ್
ತಾರಾಗಣ: ಪವನ್ ಕಲ್ಯಾಣ್, ತಮನ್ನಾ, ಪ್ರಕಾಶ್ ರಾಜ್ ಮತ್ತಿತರರು

## ಮನರಂಜನೆಯ ಮಸಾಲಾ ಪೂರಿ!

ಒಂದಿಷ್ಟು ರಾಜಕೀಯ, ಒಂದಷ್ಟು ಪಂಚಿಂಗ್ ಸಂಭಾಷಣೆಗಳು, ಸೌಂದರ್ಯಾವರಣಕ್ಕೆ ತಮನ್ನಾ, ಮಣಿ ಶರ್ಮ ಸಂಗೀತ ಇಷ್ಟನ್ನೂ ಇಟ್ಟುಕೊಂಡು ತಮ್ಮ ನೆಚ್ಚಿನ ಹೀರೊ ಪವನ್ ಕಲ್ಯಾಣ್ ಅವರಿಂದ ಅಭಿನಯ ತೆಗೆಸಿದ ಚಿತ್ರವಿದು. ವಿಮರ್ಶಕರು ಬಹುವಾಗಿಯೇನೂ ಮೆಚ್ಚದಿದ್ದರೂ ಚಿತ್ರದ ಅರ್ಧಭಾಗದಲ್ಲಿದ್ದ ಪಂಚಿಂಗ್ ಸಂಭಾಷಣೆಗಳು ರಸಿಕರನ್ನು ತೃಪ್ತಿಪಡಿಸಲು ಸಾಕಾದವು.

ಪೂರಿ ಜಗನ್ನಾಥ್ ಸೂತ್ರದ ಚಿತ್ರಗಳಂತೆ ಇದೂ ಮನರಂಜನೆಯನ್ನೇ ಕೇಂದ್ರವಾಗಿಟ್ಟುಕೊಂಡ ಚಿತ್ರ. 25 ಕೋಟಿ ರೂಪಾಯಿ ಬಜೆಟ್‌ನ ಈ ಚಿತ್ರವು ಒಂದು ಅಂದಾಜಿನ ಪ್ರಕಾರ ದುಪ್ಪಟ್ಟು ಹಣ ಮಾಡಿತು. ಮೊದಲ ದಿನದ ಗಳಿಕೆಯೇ 9 ಕೋಟಿ ರೂಪಾಯಿ ಇದ್ದದ್ದು ವಿಶೇಷ. 'ದಬಂಗ್' ಚಿತ್ರದ ರೀಮೇಕ್ ಆದ 'ಗಬ್ಬರ್ ಸಿಂಗ್'ನ ಹಿಟ್ ಅಲೆ ಹಾಗೂ ಈ ಚಿತ್ರದ ಗೆಲುವು ಪವನ್ ಕಲ್ಯಾಣ್ ಅವರನ್ನು ವರ್ಷದ ಅತ್ಯುತ್ತಮ ತಾರೆಯರ ಸಾಲಿನಲ್ಲಿ ನಿಲ್ಲಿಸಿತು.




ಚಿತ್ರ: ತುಪಾಕಿ (ತಮಿಳು)
ನಿರ್ದೇಶನ: ಎ.ಆರ್.ಮುರುಗದಾಸ್
ತಾರಾಗಣ: ವಿಜಯ್, ಕಾಜಲ್ ಅಗರ್‌ವಾಲ್, ವಿದ್ಯುತ್ ಜಮಾವಲ್ ಮತ್ತಿತರರು

## ಇಮೇಜು ಉಜ್ಜಿ ಗೆದ್ದ ಚಿತ್ರ

'ಗಜನಿ', 'ಏಳಾದೆ ಅರಿವು' ತರಹದ ಥ್ರಿಲ್ಲರ್ ಚಿತ್ರಗಳನ್ನು ನಿರ್ದೇಶಿಸಿ ಹೆಸರು ಮಾಡಿದ ಎ.ಆರ್.ಮುರುಗದಾಸ್ ವರ್ಷಕ್ಕೊಂದು ಸಿನಿಮಾ ಸೂತ್ರವನ್ನು ಒಪ್ಪಿಕೊಂಡವರು. ಈ ಸಲ ಅವರ ನಾಯಕ ಸ್ಟಾರ್ ವಿಜಯ್. ನಾಯಕನಿಂದ ಪ್ರೇಕ್ಷಕರು ಏನೇನು ನಿರೀಕ್ಷಿಸುತ್ತಾರೆ ಎಂಬ ಸೂತ್ರವನ್ನು ಒಪ್ಪಿಕೊಂಡೇ ಅವರು 'ತುಪಾಕಿ' ಹೆಸರಿನ ಮಸಾಲೆ ಸಿನಿಮಾ ಕೊಟ್ಟು ಮತ್ತೊಮ್ಮೆ ಗೆದ್ದರು.

ಭಯೋತ್ಪಾದಕರ ದಾಳಿಯನ್ನು ಮಟ್ಟ ಹಾಕಲು ನಾಯಕ ಖುದ್ದು ಅವರ ಗುಂಪು ಸೇರಿ ಜೀವದ ಹಂಗು ತೊರೆದು 'ಹೀರೋಗಿರಿ' ತೋರುವ ವಸ್ತುವಿನ ಸಿನಿಮಾ 'ತುಪಾಕಿ'. ಶೀರ್ಷಿಕೆಗೆ ತಕ್ಕಂತೆ ನಾಯಕನ ಗುಣಲಕ್ಷಣ ತುಪಾಕಿಯಂತೆಯೇ. ಆತ್ಮಹತ್ಯಾ ಬಾಂಬ್ ಆಗಿ ಖಳನನ್ನು ಮುಗಿಸಿ ದೇಶೋದ್ಧಾರಕ್ಕೆ ಕಂಕಣಬದ್ಧನಾಗುವಷ್ಟು ಧೈರ್ಯವಂತ ಈ ನಾಯಕ. ವಿಜಯ್‌ಗೆ ಇರುವ ಇಮೇಜನ್ನು ಉಜ್ಜಲು ಇಷ್ಟು ಸಾಕು. ಮುರುಗದಾಸ್ ದೊಡ್ಡ ರಿಸ್ಕ್ ತೆಗೆದುಕೊಳ್ಳದೆ ಲೆಕ್ಕಾಚಾರದಿಂದಲೇ 'ತುಪಾಕಿ' ಹೊಡೆದದ್ದು. ಗ್ಲಾಮರ್ ಬೊಂಬೆಯಾಗಿ ಕಾಜಲ್ ಅಗರ್‌ವಾಲ್ ಚಿತ್ರವನ್ನು ಕಳೆಗಟ್ಟಿಸಿದರೆ, ಹುರಿಮೈ ಖಳನಾಗಿ ವಿದ್ಯುತ್ ಜಮಾವಲ್ ಕಣ್ಣುಕೋರೈಸಿದರು. ಪ್ರೇಕ್ಷಕರಿಗೆ ರಂಜನೆಯ ಪಂಚ್ ಕೊಟ್ಟ 'ತುಪಾಕಿ' ವರ್ಷದ ಕೊನೆಯಲ್ಲಿ ತೆರೆಕಂಡು ಗೆಲುವು ಸಾಧಿಸಿದ್ದು ವಿಶೇಷ.



ಚಿತ್ರ: 3 (ತಮಿಳು)
ನಿರ್ದೇಶನ: ಐಶ್ವರ್ಯಾ ಆರ್.ಧನುಷ್
ತಾರಾಗಣ: ಧನುಷ್, ಶ್ರುತಿ ಹಾಸನ್, ಸುಂದರ್, ಪ್ರಭು, ಭಾನುಪ್ರಿಯಾ ಮೊದಲಾದವರು

## ಕೊಲೆವೆರಿಯ ಅಲೆ ಮೇಲೆ...

ಸೂಪರ್‌ಸ್ಟಾರ್ ರಜನೀಕಾಂತ್ ಪುತ್ರಿ ಐಶ್ವರ್ಯಾ ನಿರ್ದೇಶನದ ಮೊದಲ ಚಿತ್ರ '3'. ಚಿತ್ರಕ್ಕೆ ಮೂರು ಆಯಾಮಗಳಿವೆ ಎಂಬುದರ ಸಂಕೇತ ಈ ಶೀರ್ಷಿಕೆ. ಬಿಡುಗಡೆಗೆ ಮೊದಲೇ ಯುವ ಸಂಗೀತ ನಿರ್ದೇಶಕ ಅನಿರುದ್ಧ್ 'ಕೊಲೆವೆರಿ ಡಿ' ಹಾಡಿನ ಅಲೆಯೆಬ್ಬಿಸಿದರು. ಆ ಹಾಡಿನ ಧ್ವನಿಮುದ್ರಣದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ನೋಡಲು ಸಿಕ್ಕಿದ್ದು ಚಿತ್ರದ ಹೊಸ ಪ್ರಚಾರ ತಂತ್ರವಾಯಿತು.

ಗೀತೆಗೆ ಸಿಕ್ಕ ಜನಪ್ರಿಯತೆ ಚಿತ್ರಕ್ಕೆ ಸಿಗಲಿಲ್ಲವಾದರೂ ಐಶ್ವರ್ಯಾ ಸಾಕಷ್ಟು ಸಂಯಮದಿಂದ ಮೊದಲ ಚಿತ್ರ ನಿರ್ದೇಶಿಸಿದ್ದರು. ಪ್ರೇಮ, ಮದುವೆ, ದಾಂಪತ್ಯ ಹುಡುಗಾಟಿಕೆಯಲ್ಲ ಎಂಬ ನೀತಿಯೂ ಗುಪ್ತಗಾಮಿನಿಯಂತೆ ಚಿತ್ರದಲ್ಲಿತ್ತು. 'ಬೈ ಪೋಲಾರ್ ಸಮಸ್ಯೆ'ಯಿಂದ ಬಳಲುವ ನಾಯಕನಾಗಿ ಧನುಷ್ ಅಭಿನಯಕ್ಕೆ ಜನಮೆಚ್ಚುಗೆ ಸಿಕ್ಕಿತು. ಶ್ರುತಿ ಹಾಸನ್ ಸ್ನಿಗ್ಧ ಸೌಂದರ್ಯ ಚಿತ್ರದ ಪ್ಲಸ್ ಪಾಯಿಂಟ್. ಅಂದುಕೊಂಡಷ್ಟು ಬಾಕ್ಸಾಫೀಸ್ ಯಶಸ್ಸನ್ನು ಚಿತ್ರ ಕಾಣದೇ ಇದ್ದರೂ 'ವೈ ದಿಸ್ ಕೊಲೆವೆರಿ ಡಿ' ಉನ್ಮಾದದ ಅಲೆಯಂತೂ ದೀರ್ಘ ಕಾಲ ಇತ್ತು.



ಚಿತ್ರ: 22 ಫೀಮೇಲ್ ಕೊಟ್ಟಾಯಂ (ಮಲಯಾಳಂ)
ನಿರ್ದೇಶನ: ಆಶಿಕ್ ಅಬು
ತಾರಾಗಣ: ರೀಮಾ ಕಲ್ಲಿಂಗಲ್, ಫಹದ್ ಫಾಸಿಲ್, ಪ್ರತಾಪ್ ಪೋತನ್ ಮತ್ತಿತರರು

## ಸಂಕೀರ್ಣ ಕಥನದ ಸಾವಧಾನದ ನಿರೂಪಣೆ

ಮಹಿಳಾ ಪ್ರಧಾನ ಚಿತ್ರಗಳು ವಿರಳ ಎನ್ನುವ ಬಾಲಿವುಡ್ ಇತ್ತಕಡೆ ನೋಡಬೇಕು ಎಂಬಂತೆ ಆಶಿಕ್ ಅಬು ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಬೆಂಗಳೂರಿನ ನರ್ಸಿಂಗ್ ವಿದ್ಯಾರ್ಥಿನಿಯ ಬದುಕಿನಲ್ಲಿ ನಡೆಯುವ ಅನಿರೀಕ್ಷಿತ ತಿರುವುಗಳೇ ಚಿತ್ರದ ವಸ್ತು. ಕೆನಡಾಗೆ ಹೋಗಲು ವೀಸಾ ಮಾಡಿಸಿಕೊಳ್ಳುವ ಸಿದ್ಧತೆಯಲ್ಲಿರುವ ನಾಯಕಿಗೆ ಸಿರಿಲ್ ಎಂಬಾತನೊಂದಿಗೆ ಪ್ರೇಮಾಂಕುರವಾಗುತ್ತದೆ. ಇಬ್ಬರ ನಡುವೆ ಲಿವ್-ಇನ್ ಸಂಬಂಧ ಏರ್ಪಡುತ್ತದೆ.

ಆ ನಾಯಕನ ಬಾಸ್‌ನಿಂದ ಎರಡು ಸಲ ಅತ್ಯಾಚಾರಕ್ಕೆ ಒಳಗಾಗುವ ನಾಯಕಿ, ಧನದಾಹಿ ನಾಯಕನ ಪುರುಷ ಪ್ರಧಾನ ಧೋರಣೆಯಿಂದ ಏನೆಲ್ಲಾ ಕಷ್ಟ ಅನುಭವಿಸುತ್ತಾಳೆ ಹಾಗೂ ತನ್ನ ಪರಿಸ್ಥಿತಿಗೆ ಕಾರಣರಾದ ಅವರ ವಿರುದ್ಧ ಹೇಗೆ ಪ್ರತೀಕಾರ ತೀರಿಸಿಕೊಳ್ಳುತ್ತಾಳೆ ಎಂಬುದನ್ನು ಆಶಿಕ್ ಅಬು ಸಂಯಮದಿಂದ ಪಡಿಮೂಡಿಸಿದ್ದಾರೆ. ಪ್ರೀತಿ ಹಾಗೂ ದ್ವೇಷದ ಸೂಕ್ಷ್ಮಗಳನ್ನು ಒಳಗೊಂಡ ಈ ಚಿತ್ರಕ್ಕೆ ಉತ್ತಮ ವಿಮರ್ಶೆ ಸಂದಿದ್ದಲ್ಲದೆ ಆಶಿಕ್ ಅಬು ಅವರನ್ನು ಅನೇಕರು ಕೊಂಡಾಡಿದ್ದಾರೆ. ಸಾವಧಾನವನ್ನು ಬೇಡುವ ಸಂಕೀರ್ಣ ಕಥನವನ್ನು ಅವರು ನಿರೂಪಿಸಿರುವ ರೀತಿಗೆ ಸಂದ ಯಶಸ್ಸು ಇದು.